(c) whether any amount out of the principal funds and interest thereon has been so far transferred to Taluk Development Board, Khanapur for the development of these two villages, if so on what dates and what works, have been taken up out of these amounts',

(d) whether the villagers of the two villages have so far represented to the Government of Mysore through the Deputy Commissioner, Belgaum and the Taluk Board, Khanapur in this matter ?

SRI M MALLIKARJUNASWAMY (Minister for Community Development and Social Welfare).—

(a) No

(b) Does not arise in view of reply to clause (a) above.

(c) Yes

Rs. 637.50 on 30-4-1960

Rs. 288.00 on 15-2-1962

for construction of a drinking water well at Chikkale

(d) No

IRON ORE PROCESSING UNIT IN CHIKKANAYAKANAHALLI TALUK

99. SRI N. BASAVAIAH (Chikkanaikanahalli) :—

Will the Minister for Industries be pleased to state :—

(a) whether it has come to the notice of the Government that several representations were given by the Public for the sanction of the iron ore processing unit in Chikkanaikanahalli Taluk;

(b) if so, is there any proposal before the Government to establish an iron ore processing unit in Chikkanaikanahalli Taluk ?

SRI S. M. KRISHNA (Minister for Industries).—

(*a*) No

(*b*) Does not arise in view of reply to clause (a).

NOTICE OF ADJOURNMENT MOTION

Re: Death of a person at M.P.C.C. Meeting on 25-8-1973

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ):—ಮಾನ್ಯ ಅಧ್ಯಕ್ಷರೇ ನಾನು ಒಂದು ನಿಲುವಳಿ ಸೂಚನೆಯನ್ನು ಇದೇ ನಗರದಲ್ಲಿ ತಾಃ 25-8-1973ರಲ್ಲಿ ನಡೆದ ಅಂದರೆ ಮೈಸೂರು ಪ್ರದೇಶ ಕಾಂಗ್ರೆಸ್ ಭವನದಲ್ಲಿ ನಡೆದಂಥ ಒಂದು....

ಅಧ್ಯಕ್ಷರು:—ಮಾನ್ಯ ಸದಸ್ಯರ ನಿಲುವಳಿ ಸೂಚನೆಯ ಬಗ್ಗೆ ಆ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಎಂದು ನಮ್ಮ ಆಫೀಸಿನಿಂದ ಉತ್ತರವನ್ನು ಕಳುಹಿಸಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ:—'ತಡೆಹಿಡಿಯಲಾಗಿದೆ' ಎಂದು ಅದರಲ್ಲಿ ಹೇಳಿದೆ, ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ ಎಂದು ಅದರಲ್ಲಿ ಖಚಿತವಾಗಿ ಹೇಳಿಲ್ಲ. 'ತಡೆಹಿಡಿಯಲಾಗಿದೆ' ಎಂದರೆ ಅವಕಾಶ ಕೊಡುವುದನ್ನು ಸ್ವಲ್ಪ ತಡೆ ಹಿಡಿಯಲಾಗಿದೆ ಎಂದು ಮಾತ್ರ ಅರ್ಥವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ:—ಮಾನ್ಯ ಅಧಕ್ಷರೇ ತಾವು ದಯಮಾಡಿ ಸ್ವಲ್ಪ ಕುಳಿತುಕೊಳ್ಳಬೇಕು....

ಅಧ್ಯಕ್ಷರು;—ನಾನು ನಿಂತಿರುವಾಗ ಮಾನ್ಯ ಸದಸ್ಯರುಗಳು ಯಾರೂ ಏಳಬಾರದು, ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ನಾನು ಈ ವಿಚಾರವಾಗಿ ರೂಲ್ಸ್‌ನ್ನು ನೋಡಿರುವ ಪ್ರಕಾರ ಇದರಲ್ಲಿ ಸರ್ಕಾರದ ಜವಾಬ್ದಾರಿ ಏನೇನೂ ಇಲ್ಲ. ನೀವು ನಿಲುವಳಿ ಸೂಚನೆಯನ್ನು ಕಳುಹಿಸಬೇಕಾದರೆ ಅದಕ್ಕೆ ಸಂಬಂಧಪಟ್ಟ ರೂಲ್ಸ್ ಇದೆ. ಅದರಂತೆ ಕೊಟ್ಟಿದ್ದೀರಿ. ಈ ವಿಚಾರದಲ್ಲಿ ನಾನು ತಮ್ಮಲ್ಲಿ ಅನೇಕರನ್ನು ವಿಚಾರ ಮಾಡಿದ್ದೇನೆ, ಸರಕಾರದವರಲ್ಲಿಯೂ ನಾನು ಇದರ ಬಗ್ಗೆ ವಿಚಾರ ಮಾಡಿದ್ದೇನೆ. ರೂಲ್ಸನ್ನೂ ಸಹ ನೋಡಿದ್ದೇನೆ. ಇಷ್ಟೆಲ್ಲಾ ಆದಮೇಲೆ ತಮಗೆ ಉತ್ತರವನ್ನೂ ಸಹ ಕೊಟ್ಟು